**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 193/2019**

ಸಿಡಬ್ಲ್ಯು 10 ಪಿಡಬ್ಲ್ಯು- 3

ದಿನಾಂಕಃ 16.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ಎ ಬಿ ಹಾಲಾವರ

ವಯಸ್ಸು : 50 ವರ್ಷ

ಉದ್ಯೋಗ : ಆರ್ ಎಫ ಓ

ವಾಸ ಸ್ಥಳ : ರಾಯಚೂರು

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನಾನು ರಾಯಬಾಗ ವಲಯ ಅರಣ್ಯಾಧಿಕಾರಿ ಎಂದು ನವೆಂಬರ 2016 ರಿಂದ ಪೆಬ್ರುವರಿ 2020 ರವರೆಗೆ ಸೇವೆ ಸಲ್ಲಿಸಿದ್ದೇನೆ. 06.07.2018 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟ ಜಪ್ತಿ ಮಾಡಿದ ವಸ್ತುಗಳನ್ನು ಹಾರೂಗೇರಿ ಪೋಲಿಸರು ನನಗೆ ಒಪ್ಪಿಸಿದರು. 07.072018 ರಂದು ನಾನು ಎರಡು ಮಾದರಿ ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ಪರೀಕ್ಷೆ ಮಾಡಿ ಅವುಗಳು ಶ್ರೀಗಂಧದ ಕಟ್ಟಿಗೆ ಇವೆ ಎಂದು ಅದೇ ದಿನ ಅಭಿಪ್ರಾಯ ಪ್ರಮಾಣಪತ್ರ ನೀಡಿದ್ದೇನೆ. ಸಾಕ್ಷಿ ಸದರಿ ಪತ್ರ ನೋಡಿ ಗುರುತಿಸಿದ್ದು ಇದನ್ನು ನಿಪಿ 1 ಎಂದು, ಸಾಕ್ಷಿ ಸಹಿ ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರತ್ಯೇಕವಾದ ಅಬಿಪ್ರಾಯ ಪ್ರಮಾಣಪತ್ರ ನೀಡಿಲ್ಲ ಎಂದು ಹೇಳುತ್ತಾರೆ. ಶ್ರೀಗಂಧದ ಕಟ್ಟಿಗೆಯನ್ನು ಪರೀಕ್ಷಿಸುವ ತರಭೇತಿಯನ್ನು

ಹೊಂದಿದ್ದೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ. 1 ಮತ್ತು 2 ನ್ನು ನೋಡಿ ಇವುಗಳನ್ನು ನಾನು ಪರೀಕ್ಷೆ ಮಾಡಿದ್ದೇನೆಂದು ಹೇಳುತ್ತಾರೆ.

**<u>ಪಾಟೀ ಸವಾಲುಃ</u>-** 3 ನೇ ಆರೋಪಿ ಪರ ಶ್ರೀ ಐ ಬಿ ಆರ್ ವಕೀಲರಿಂದಃ

ಹಾರೂಗೇರಿ ಪೋಲಿಸರು ಸದರಿ ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ಪರೀಕ್ಷೆ ಮಾಡಿ ಪ್ರಮಾಣಪತ್ರ ನೀಡಲು ನನಗೆ ಪತ್ರ ಬರೆದಿಲ್ಲ ಆದರೆ ಅವರು ಘಟಪ್ರಭಾ ವಿಭಾಗೀಯ ಕಚೇರಿಗೆ ಪತ್ರ ಬರೆದಿದ್ದರು ಅಲ್ಲಿಂದ ಅವರ ನಿರ್ದೇಶನದ ಮೇರೆಗೆ ಪೋಲಿಸರು ನನಗೆ ತಂದು ಪರೀಕ್ಷೆಗೆ ಒಪ್ಪಿಸಿದರು. ನಾನು ಮು.ಮಾ.1 ಮತ್ತು 2 ರ ಉದ್ದಳತೆ, ಗಾತ್ರ ಮತ್ತು ತೂಕನ್ನು ನಿಪಿ 1 ರಲ್ಲಿ ನಮೂದಿಸಿಲ್ಲ ಅನ್ನುವದು ನಿಜ. ಶ್ರೀಗಂಧದ ಕಟ್ಟಿಗೆ ಪರೀಕ್ಷೆ ಮಾಡವ ತರಭೇತಿ ಹೊಂದಿದ ಬಗ್ಗೆ ಮತ್ತು ಪ್ರಮಾಣಪತ್ರ ನೀಡುವ ಬಗ್ಗೆ ಸರ್ಕಾರದ ಆದೇಶಗಳನ್ನು ಹಾಜರು ಪಡಿಸಿಲ್ಲ ಅನ್ನುವದು ನಿಜ. ನಿಪಿ 1 ಪ್ರಮಾಣಪತ್ರ ಅಲ್ಲ ಅನ್ನುವದು ನಿಜ. ಅದು ಪತ್ರ ಇದೆ ಅನ್ನುವದು ನಿಜ. ಹಾರೂಗೇರಿ ಪೋಲಿಸರ ಮಾತು ಕೇಳಿ ಮು.ಮಾ.1 ಮತ್ತು 2 ನ್ನು ಪರೀಕ್ಷೆ ಮಾಡಿ ನಿಪಿ 1 ನ್ನು ನೀಡಿದ್ದೇನೆ ಅನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ</u>-** 1 ನೇ ಆರೋಪಿ ಪರ ಶ್ರೀ ಎಲ್ ಬಿ ಪಿ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆಂದು ಹೇಳಿ ಪಾಟೀ ಸವಾಲು ಮಾಡಿರುವುದಿಲ್ಲ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.